Q.P. Code – 32103

# First Semester B.A./B.S.W./B.F.A./B.V.A. Degree Examination, October/November 2019

*(CBCS – Semester Scheme – New)*

**ಕನ್ನಡ ಭಾಷೆ**

## Paper I – ಕಾವ್ಯ ಸಂಚಯ – 1, ನಾಟಕ – ಚಂದ್ರಹಾಸ

*Time : 3 Hours]* *[Max. Marks : 90*

ಭಾಗ – 1

ಕಾವ್ಯ ಸಂಚಯ

I. (ಅ) **ಒಂದು** ಪದ್ಯದ ವಿಶೇಷವನ್ನು ವಿವರಿಸಿ : **(1 × 6 = 6)**

1. ಪಡೆದೊಡೆ ಕಂಪಂ ಬಣ್ಣಂ
ಒಡೆಯವು ಬಣ್ಣನೆ ಪಡೆದುವಪ್ಪೊಡೆ ಕಂಪಂ
ಪಡೆಯುವುಟೆಂದಲರ್ಗಳೆರಡುಮ
ನೊಡೆವೆಳೆದೀ ಚಂಪಕಕ್ಕೆ ಪೂಗಳೆ ದೊರೆಯೇ

2. ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯಿತ್ತಡೆ
ನಿನ್ನನಿತ್ತೆ ಕಾಣಾ! ರಾಮನಾಥ.

(ಆ) **ಮೂರನ್ನು** ಸಂದರ್ಭ ಸಹಿತ ವಿವರಿಸಿ : **(3 × 3 = 9)**

1. ನನ್ನ ಸೊಸೆಯಿಂದ ಶಿವನೆ ನನಗೆ ಬದುಕಲು ಬಾಳಿಲ್ಲ.
2. ಬೆಟ್ಟಕ್ಕೆ ಚಳಿಯಾದರೆ ಏನು ಹೊದ್ದಿಸುವಿರಯ್ಯ?
3. ನಿನಗೆ ಶಿವನಂದು ಪಾಶುಪತ ಬಾಣಮಂ ಕೊಟ್ಟುದಿಲ್ಲವೆ.
4. ಮರಣಕ್ಕೆ ಒಳಗಾಗೋ ನರಕುರಿಗಳ ನಿಮಗೆ ಅರುವಿರಲಿ ಸಾರುವೆ ಕೇಳಿರಿ.

(ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2 × 5 = 10)**

1. ಜನಪದ ಗೀತೆ
2. ಶಿಶುನಾಳ ಶರೀಫ
3. ಲಕ್ಮೀಶ

SREE SIDDAGANGA COLLEGE OF ARTS, SCIENCE & COMMERCE FOR WOMEN TUMKUR. LIBRARY & INFORMATION CENTRE Page No ........ Date........

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಕನ್ನಡದ ಆದಿಕವಿ ಯಾರು?
2. ಆಮುಗೆ ರಾಯಮ್ಮನ ಅಂಕಿತವೇನು?
3. ಅತಿಭಕ್ತನ ಮೀಸಲು ಭಕ್ತಿಗೆ ಒಲಿದವರು ಯಾರು?
4. 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಯಾರನ್ನು ಕರೆಯುತ್ತಾರೆ?
5. 'ಹದಿಬದೆಯ ಧರ್ಮ' ಕೃತಿಯ ಕರ್ತೃ ಯಾರು?

II. ಎರಡು ಪ್ರಶ್ನೆಗಳಿಗೆ ಉತ್ತರಿಸಿ : **(2 × 10 = 20)**

1. 'ಸತ್ಯವಂತೆ ಹಡೆದವ್ವ' ಗೀತೆಯಲ್ಲಿ ವ್ಯಕ್ತವಾಗಿರುವ ಸತ್ಯನಿಷ್ಠೆಯನ್ನು ವಿವರಿಸಿ.
2. ಭರತನ ಅಂತಃಪುರದ ಸ್ತ್ರೀಯರು ಪುಷ್ಪೋದ್ಯಾನದಲ್ಲಿ ಕ್ರೀಡಾವಿಲಾಸಿನಿಯರಾಗಿ ಮನರಂಜನೆ ಪಡೆದ ಬಗೆಯನ್ನು ವಿವರಿಸಿ.
3. ಭೀಮನು–ಬಕಾಸುರನನ್ನು ವಧೆಗೈದ ಪ್ರಸಂಗವನ್ನು ಬರೆಯಿರಿ.

ಭಾಗ – 2

ನಾಟಕ – ಚಂದ್ರಹಾಸ

III. (ಅ) ಒಂದರ ಸ್ವಾರಸ್ಯವನ್ನು ಬರೆಯಿರಿ : **(1 × 5 = 5)**

1. ಅನಾಥ ಮಾತ್ರನೆಂದೆಣಿಸದಿರು ನೀನಾತನಂ ಕಾಣ್
   ರಾಜ ಚಿಹ್ನೆಗಳೆಂದು ಶೋಭಿಪುವು ಮೆಯ್ಯಲ್ಲಿ?
   ಮೊಗದ ತೇಜವ ನೋಡು, ಪಾರ್ವನಾಂ ಪಾರ್ದು ಪೇಳ್ವೆನ್
   ಎಂದಿರ್ದೊಡಂ ಈ ಪೊಳಲ್ಗೆ, ಈ ಕುಂತಳಾಧೀಶನ್
   ಅಪ್ಪ ನಮ್ಮೀ ಪೊಡವಿಗೆ, ಒಡೆಯನಹನ್ ಈತನ್.

2. ಓ ಮಿಂಚೆ ಬೆಳಗದಿರು ಈ ಘೋರವಂ ;
   ನಿಲ್ಲಿ, ಓ ಮಳೆಗಾಳಿ ಮೊಳಗುಗಳೆ ನಿಲ್ಲಿ,
   ಆಲಿಸಲಿ ಲೋಕವೆಲ್ಲಂ ಪಾಪಿಯಾ ಗೋಳಾಟವಂ.
   ಕತ್ತಲೆಯೆ ಕವಿ, ಮುತ್ತು; ಮನಕೆ ಮರೆಹವನೊತ್ತು.
   ಪರಮಾತ್ಮ ಕ್ಷಮಿಸೆನ್ನ, ಬೇಡ ಮನ್ನಿಸಬೇಡ!
   ನರಕವೇ ಬಾಯಿತೆರೆ! ನುಂಗೆನ್ನ ಜೀವಮಂ!

(ಅ) ಮೂರನ್ನು ಸಂದರ್ಭ ಸಹಿತ ವಿವರಿಸಿ : (3 × 2 = 6)

1. ಆಯಸದ ಕೊಲೆಯಲ್ಲ ಆದರೂ ಮಹತ್ತಿನದು.

2. ಆ ಪುಣ್ಯಶಿಶು ಮಹಿಮೆಯಿಂ ಆರಮನೆಯ ಅಂಗಳಕೆ ಹೊನ್ನಮಳೆ ಸುರಿಯದಂತೆ.

3. ಆರೋ ಆ ಪುಣ್ಯಾತ್ಮ, ನಿನ್ನ ಧ್ಯಾನದ ಪರಮ ಪುರುಷ

4. ಪುರೋಹಿತರೇ, ಮದನಗಿನ್ನೂ ಹರಣ ಹೋದಂತಿಲ್ಲ!

(ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ : (1 × 4 = 4)

1. ಕುವೆಂಪು

2. ಗಾಲವ

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : (5 × 1 = 5)

1. ಚಂದ್ರಹಾಸನ ಬಳಿಯಿದ್ದ ದೈವಿಕ ವಸ್ತು ಯಾವುದು?

2. ದುಷ್ಟ ಬುದ್ಧಿಯ ಮಗನ ಹೆಸರೇನು?

3. ವಿಷಯೆಯ ಸಖಿಯೊಬ್ಬಳ ಹೆಸರನ್ನು ತಿಳಿಸಿ.

4. ಮೇಧಾವಿನಿ ಯಾರು?

5. ಚಂದ್ರಹಾಸನ ದಳಪತಿಯೊಬ್ಬನ ಹೆಸರನ್ನು ತಿಳಿಸಿ.

IV. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2 × 10 = 20)

1. ಚಂದ್ರಹಾಸನ ಆಗಮನದಿಂದ ಚಂದನಾವತಿಯಲ್ಲಾದ ಪರಿವರ್ತನೆಗಳೇನು? ಚರ್ಚಿಸಿ.

2. ದುಷ್ಟ ಬುದ್ಧಿಯ ಕುತಂತ್ರಗಳೇ ಅವನ ಅವಸಾನಕ್ಕೆ ಕಾರಣವಾದವು ಹೇಗೆ? ಚರ್ಚಿಸಿ.

3. ಮುದುಕಿ, ವಿಷಯೆ, ಕುಳಿಂದಕ – ಇವರಲ್ಲಿ ಇಬ್ಬರ ಪಾತ್ರಗಳನ್ನು ಪರಿಚಯಿಸಿ..

SREE SIDDAGANGA COLLEGE OF ARTS, SCIENCE & COMMERCE FOR WOMEN
TUMKUR.
LIBRARY & INFORMATION CENTRE
Page No ..........
Date ..........